# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 9 |
| ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 04.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳನ್ನು ತೆರೆಯಲಾಗಿದೆ ಹಾಗೂ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; (ವಿವರ ಒದಗಿಸುವುದು)</td><td>
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಒಟ್ಟು 570 ಮಳಿಗೆ / ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಕಳೆದ ಮೂರು ವರ್ಷಗಳಲ್ಲಿ ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದ ಮೂಲಕ ರಾಜ್ಯದಲ್ಲಿ ನೋಂದಣಿಯಾಗಿರುವ MSME ಕೈಗಾರಿಕೆಗಳ ವಿವರಗಳು ಕೆಳಕಂಡಂತಿವೆ:
<table>
<tr><th>ಕ್ರ. ಸಂ</th><th>ವರ್ಷ</th><th>ನೋಂದಣಿಯಾಗಿರುವ MSME ಉದ್ಯಮಗಳ ಸಂಖ್ಯೆ</th></tr>
<tr><td>1</td><td>2022-23</td><td>4,24,286</td></tr>
<tr><td>2</td><td>2023-24</td><td>5,17,124</td></tr>
<tr><td>3</td><td>2024-25<br>(ಜನವರಿ 2025 ಅಂತ್ಯಕ್ಕೆ)</td><td>3,83,442</td></tr>
<tr><td colspan="2">ಒಟ್ಟಾರೆ</td><td>13,24,852</td></tr>
</table>
</td></tr>
<tr><td>ಆ)</td><td>ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಯಾವುದಾದರು ಯೋಜನೆಯನ್ನು ಕೈಗೊಳ್ಳಲಾಗಿದೆಯೇ; ಇಲ್ಲದ್ದಿದಲ್ಲಿ, ಯೋಜನೆಗಳನ್ನು ಕೈಗೊಳ್ಳುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;</td><td>
ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಕುರಿತು ನೂತನ ಕೈಗಾರಿಕಾ ನೀತಿ 2025-30 ಜಾರಿಗೊಳಿಸಲಾಗಿರುತ್ತದೆ. ಈ ನೀತಿಯಡಿ ವಲಯವಾರು ಅರ್ಹ ಘಟಕಗಳಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕಲ್ಪಿಸಲಾಗಿದೆ.
2024-25ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡ ಘೋಷಣೆಗಳನ್ನು ಮಾಡಿದ್ದು, ಸದರಿ ಘೋಷಣೆಗಳ ಕುರಿತು ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ:
ಕಂಡಿಕೆ-333 ಮಹಾತ್ಮಾ ಗಾಂಧೀಜಿಯವರು ಭೇಟಿ ನೀಡಿದ್ದ ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ಖಾದಿ ಚಟುವಟಿಕೆ ಪ್ರೋತ್ಸಾಹಕ್ಕಾಗಿ ಸದರಿ ಯೋಜನೆಗೆ ದಿನಾಂಕ: 18.07.2024 ರಂದು ತಾತ್ವಿಕ ಅನುಮೋದನೆ ನೀಡಿ ಆದೇಶಿಸಲಾಗಿದೆ.
ಕಂಡಿಕೆ-320 ವಿವಿಧ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿರುವ ಕೈಗಾರಿಕಾ ವಸಾಹತುಗಳನ್ನು ಕೇಂದ್ರ ಸರ್ಕಾರದ ಸಹಯೋಗದಲ್ಲಿ 39 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕರ್ನಾಟಕ ರಾಜ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ನಿಗಮದ (KSSIDC) ಮೂಲಕ ಮೇಲ್ದರ್ಜೆಗೇರಿಸುವ ಯೋಜನೆಗೆ ದಿನಾಂಕ: 31.07.2024 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.
</td></tr>
</table>

<table>
<tr>
<td></td>
<td></td>
<td>
ಕಂಡಿಕೆ-322 ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಸ್ಟಾಕ್ ಎಕ್ಸ್ ಚೇಂಜ್ ಗಳಲ್ಲಿ ಐಪಿಓ ಬಿಡುಗಡೆ ಮಾಡಲು ತಗಲುವ ವೆಚ್ಚದಲ್ಲಿ ಗರಿಷ್ಟ ಮಿತಿ 25 ಲಕ್ಷ ರೂ.ಗಳಿಗೆ ಒಳಪಟ್ಟು ಶೇ.50 ರಷ್ಟು ಸಹಾಯಧನ ನೀಡಲಾಗುವುದು ಎಂಬ ಯೋಜನೆಗೆ ದಿನಾಂಕ: 18.06.2024 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ದಿನಾಂಕ: 07.02.2024 ರಂದು ಭಾರತದ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಯೋಜನೆಗಳ ಪ್ರಚಾರಕ್ಕಾಗಿ ಯೋಜನೆಯ ಮಾರ್ಗಸೂಚಿಗಳನ್ನು ಈಗಾಗಲೇ ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಕಳುಹಿಸಲಾಗಿದೆ.
ಕಂಡಿಕೆ-323 ಸರ್ಕಾರಿ ಇಲಾಖೆಗಳು ಸಾರ್ವಜನಿಕ ಉದ್ದಿಮೆಗಳು ಮತ್ತು (ಎಂ.ಎಸ್.ಎಂ.ಇ.) ಗಳನ್ನು TReDS ವೇದಿಕೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಎಂ.ಎಸ್.ಎಂ.ಇ. ಗಳಿಗೆ ಬರಬೇಕಾದ ಪಾವತಿಗಳು ಕಾಲಮಿತಿಯೊಳಗೆ ಸ್ವೀಕೃತಿಯಾಗಿ ಅವುಗಳ ನಗದು ಹರಿವು ಸದೃಢಗೊಳಿಸಬೇಕು ಎಂಬ ಉದ್ದೇಶದಿಂದ TReDS ಸೇವಾ ಪೂರೈಕೆದಾರರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗುವುದು ಎಂಬ ಯೋಜನೆಗೆ ದಿನಾಂಕ: 29.10.2024 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
ಕಂಡಿಕೆ-324 ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳಿಗೆ ವಿಶೇಷ ಘಟಕ ಯೋಜನೆಯಡಿ ಕರ್ನಾಟಕ ಚರ್ಮ ಮತ್ತು ಫ್ಯಾಷನ್ ತಂತ್ರಜ್ಞಾನ ಸಂಸ್ಥೆಯಲ್ಲಿ(ಕೆಐಎಲ್‌ಟಿ) ಡಿಪ್ಲೋಮಾ ಇನ್ ಲೆದರ್ ಅಂಡ್ ಫ್ಯಾಶನ್ ಟೆಕ್ನಾಲಜಿ ಕೋರ್ಸ್ ಮಾಡಲು ಪ್ರೋತ್ಸಾಹ ಧನ ನೀಡಲಾಗುವುದು ಎಂಬ ಯೋಜನೆಗೆ ದಿನಾಂಕ: 18.06.2024 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಮತ್ತು 2024-25ಕ್ಕೆ ರೂ.32.00 ಲಕ್ಷಗಳನ್ನು ನಿಗದಿಪಡಿಸಿದ್ದು, ಈಗಾಗಲೇ ರೂ.16.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
</td>
</tr>
<tr>
<td>ಇ)</td>
<td>ಈಗಾಗಲೇ ಸ್ಥಾಪಿಸಲಾಗಿರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಸಹಾಯಧನ ನೀಡಲಾಗಿದೆಯೇ? (ವಿವರ ನೀಡುವುದು)</td>
<td>
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡ ನಿವೇಶನ / ಮಳಿಗೆ ಹಂಚಿಕೆದಾರರಿಗೆ ಸಹಾಯಧನ ವಿಸ್ತರಣೆ ಮಾಡಲಾಗಿದೆ.
(ರೂ.ಕೋಟಿಗಳಲ್ಲಿ)
<table>
<tr><th>Year</th><th>SCP</th><th>No of Beneficiary</th><th>TSP</th><th>No of Beneficiary</th></tr>
<tr><td>2022-23</td><td>59.54</td><td>227</td><td>9.70</td><td>23</td></tr>
<tr><td>2023-24</td><td>-</td><td>-</td><td>-</td><td>-</td></tr>
<tr><td>2024-25</td><td>20.00</td><td>81</td><td>5.00</td><td>21</td></tr>
</table>
ಈಗಾಗಲೇ ಸ್ಥಾಪಿಸಲಾಗಿರುವ ಸಣ್ಣ ಕೈಗಾರಿಕೆಗಳಿಗೆ ಕೈಗಾರಿಕಾ ನೀತಿ 2020-25 ರಡಿ ಅರ್ಹ ಘಟಕಗಳಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಕಳೆದ 03 ವರ್ಷಗಳಲ್ಲಿ ಒಟ್ಟು 1965 ಘಟಕಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗಿದೆ.
</td>
</tr>
</table>

ಸಿಐ 34 ಸಿಎಸ್‌ಸಿ 2025

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

ಅನುಬಂಧ-1

**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅಭಿವೃದ್ಧಿಪಡಿಸಿರುವ ಕೈಗಾರಿಕಾ ವಸಾಹತುಗಳಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಹಂಚಿಕೆ ಮಾಡಿರುವ ನಿವೇಶನ/ಮಳಿಗೆಗಳ ಜಿಲ್ಲಾವಾರು ಹಾಗೂ ವರ್ಷವಾರು ವಿವರ.**

| ಕ್ರ. ಸಂ | ಜಿಲ್ಲೆಯ ಹೆಸರು | ವರ್ಷವಾರು ಹಂಚಿಕೆ ಮಾಡಿರವ ಮಳಿಗೆ/ನಿವೇಶನಗಳ ವಿವರ | | |
|---|---|---|---|---|
| | | 2021-22 | 2022-23 | 2023-24 |
| 1 | ಬೆಂಗಳೂರು ನಗರ | - | 41 | - |
| 2 | ಬೆಂಗಳೂರು ಗ್ರಾಮಾಂತರ | - | 94 | - |
| 3 | ರಾಮನಗರ | - | 4 | - |
| 4 | ತುಮಕೂರು | 18 | 33 | - |
| 5 | ಚಿಕ್ಕಬಳ್ಳಾಪುರ | 8 | 17 | - |
| 6 | ಕೋಲಾರ | - | - | - |
| 7 | ದಾವಣಗೆರೆ | 20 | - | - |
| 8 | ಚಿತ್ರದುರ್ಗ | 27 | 38 | - |
| 9 | ಮೈಸೂರು | - | - | - |
| 10 | ಮಂಡ್ಯ | 3 | 10 | - |
| 11 | ಕೊಡಗು | - | - | - |
| 12 | ಚಾಮರಾಜನಗರ | 2 | - | - |
| 13 | ಶಿವಮೊಗ್ಗ | 2 | 77 | - |
| 14 | ಚಿಕ್ಕಮಗಳೂರು | - | - | - |
| 15 | ಹಾಸನ | - | 1 | - |
| 16 | ದಕ್ಷಿಣ ಕನ್ನಡ | - | 1 | - |
| 17 | ಉಡುಪಿ | - | 4 | - |
| 18 | ಧಾರವಾಡ | 1 | 9 | - |
| 19 | ಹಾವೇರಿ | 1 | 6 | - |
| 20 | ಗದಗ್ | 20 | 5 | - |
| 21 | ಉತ್ತರಕನ್ನಡ | - | - | - |
| 22 | ಬೆಳಗಾವಿ | 1 | 12 | - |
| 23 | ಬಾಗಲಕೋಟೆ | 5 | 5 | - |
| 24 | ವಿಜಯಪುರ | 10 | - | - |
| 25 | ಕಲಬುರಗಿ | - | - | 27 |
| 26 | ಬೀದರ್ | 38 | 4 | 9 |
| 27 | ಯಾದಗಿರಿ | - | - | 2 |
| 28 | ಬಳ್ಳಾರಿ | 8 | - | - |
| 29 | ಕೊಪ್ಪಳ | - | - | - |
| 30 | ವಿಜಯನಗರ | - | 2 | - |
| 31 | ರಾಯಚೂರು | 5 | - | - |
| | ಒಟ್ಟು | **169** | **363** | **38** |

ವ್ಯವಸ್ಥಾಪಕ ನಿರ್ದೇಶಕರು